ಮಡಿಕೇರಿಯಲ್ಲಿ ಅರ್ಧಕ್ಕೆ ನಿಂತ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು

876 (1504); ಶ್ರೀ ಅಪ್ಪಚ್ಚು ರಂಜನ್ ಎಂ. ಪಿ. (ಮಡಿಕೇರಿ)

(ಅ) ಲೋಕೋಪಯೋಗಿ ಇಲಾಖೆಯಲ್ಲಿ ಕಳೆದ ಮೂರು ವರ್ಷದಿಂದ ಕೊಡಗು ಜಿಲ್ಲೆಯಲ್ಲಿ ಅರ್ಧಕ್ಕೆ ನಿಂತ ಕಾಮಗಾರಿಗಳು ಎಷ್ಟು; ವಿವರ ನೀಡುವುದು;

(ಆ) ಕಾಮಗಾರಿ ನಿಲ್ಲಲು ಕಾರಣವೇನು; ಅದನ್ನು ಪುನರಾರಂಭಿಸಲು ಇಲಾಖೆ ಕೈಗೊಂಡ ಕ್ರಮವೇನು;

(ಇ) ನಿಂತಿರುವ ಕಾಮಗಾರಿಯಿಂದಾಗಿ ಎಷ್ಟು ಯೋಜನೆಗಳು ನಿಗದಿತ ಸಮಯಕ್ಕೆ ಪೂರ್ಣಗೊಳ್ಳುತ್ತಿಲ್ಲ;

(ಈ) ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ;

(ಉ) ಯೋಜನೆಯ ನಿಧಾನಗತಿಗೆ ಕಾರಣವಾದ ಗುತ್ತಿಗೆದಾರರು ಮತ್ತು ಸಂಬಂಧಿಸಿದ ಸಿಬ್ಬಂದಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ (ಯೋಜನೆವಾರು ವಿವರ ನೀಡುವುದು)?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಕೊಡಗು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಈ ಕೆಳಕಂಡ ಕಟ್ಟಡ ಕಾಮಗಾರಿಯ ಪ್ರಗತಿಯೂ ಕುಂಠಿತವಾಗಿರುತ್ತದೆ.

ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಗುತ್ತಿಗೆದಾರರ ಹೆಸರು	ಕಾಮಗಾರಿ ಪ್ರಾರಂಭಿಸಿದ ದಿನಾಂಕ	ಕಾಮಗಾರಿ ಪೂರ್ಣಗೊಳಿಸಬೇಕಾದ ದಿನಾಂಕ
ಆಲೂರು ಸಿದ್ದಾಪುರದಲ್ಲಿ ಕೈಗಾರಿಕಾ ಕಟ್ಟಡ ನಿರ್ಮಾಣ (2ನೇ ಹಂತ)	300.00	ಶ್ರೀ ಎನ್. ಎಸ್. ರಾಜೇಂದ್ರ	26.03.2010	25.05.2012

(ಆ) ಆಲೂರು–ಸಿದ್ದಾಪುರದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ (2ನೇ ಹಂತ) ಕಾಮಗಾರಿಯು ಗುತ್ತಿಗೆದಾರರ ನಿರಾಸಕ್ತಿಯಿಂದ ನಿಧಾನ ಪ್ರಗತಿಯಲ್ಲಿರುತ್ತದೆ.

ಕಾಮಗಾರಿಯನ್ನು ಸಕಾಲದಲ್ಲಿ ಮುಕ್ತಾಯಗೊಳಿಸಲು ವಿಫಲರಾಗಿದ್ದ ರಿಂದ ಗುತ್ತಿಗೆದಾರರಿಗೆ ಹಲವಾರು ಬಾರಿ ತಿಳುವಳಿಕೆ ಪತ್ರಗಳನ್ನು ನೀಡಿದ್ದು, ಟೆಂಡರ್ ನಿಯಮಾನುಸಾರ ದಂಡ ವಿಧಿಸಲು ಕಾಲಕಾಲಕ್ಕೆ ಗುತ್ತಿಗೆದಾರರಿಗೆ ತಿಳುವಳಿಕೆ ನೀಡಿದ್ದರೂ ಸಹ ಕಾಮಗಾರಿಯ ಪ್ರಗತಿ ಯನ್ನು ನೀಡುವಲ್ಲಿ ವಿಫರಾಗಿದ್ದರಿಂದ ` 9600.00 ಗಳ ದಂಡವನ್ನು ವಿಧಿಸಲಾಗಿದೆ.

ಸದರಿ ಕಾಮಗಾರಿಯ ಗುತ್ತಿಗೆಯನ್ನು ` 302.74 ಲಕ್ಷಗಳ ಮೊತ್ತಕ್ಕೆ ವಹಿಸಲಾಗಿದ್ದು, ಇದುವರೆಗಿನ ಒಟ್ಟಾರೆ ಆರ್ಥಿಕ ಪ್ರಗತಿ `132.71 ಲಕ್ಷಗಳಾಗಿರುತ್ತವೆ. ಉಳಿಕೆ `169.33 ಲಕ್ಷಗಳ ಮೊತ್ತದ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಸದರಿ ಕಾಮಗಾರಿ ಗುತ್ತಿಗೆ ರದ್ಧತಿ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಗುತ್ತಿಗೆ ಕರಾರನ್ನು

ರದ್ದುಗೊಳಿಸಿದ ನಂತರ ಉಳಿಕೆ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲಾಗು ವುದು.

(ಇ) ಅನ್ವಯಿಸುವುದಿಲ್ಲ.

(ಈ) ಗುತ್ತಿಗೆದಾರರ "ಹೊಣೆ ಮತ್ತು ಜವಾಬ್ದಾರಿ"ಯಡಿ ಯಲ್ಲಿ ಸದರಿ ಕಾಮಗಾರಿಯನ್ನು ರದ್ದುಪಡಿಸುತ್ತಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗುವುದಿಲ್ಲ.

(ಉ) ಸದರಿ ಯೋಜನೆಯ ನಿಧಾನಗತಿಗೆ ಗುತ್ತಿಗೆದಾರರು ಕಾರಣರಾಗಿದ್ದು, ಅವರ ಕರಾರನ್ನು ಗುತ್ತಿಗೆದಾರರ "ಹೊಣೆ ಮತ್ತು ಜವಾಬ್ದಾರಿ"ಯಡಿ ರದ್ದುಗೊಳಿಸುವುದರಿಂದ ಕಾಮಗಾರಿಯ ಮೇಲಿನ ವೆಚ್ಚವನ್ನು ಗುತ್ತಿಗೆದಾರರಿಂದಲೇ ವಸೂಲಿ ಮಾಡಲಾಗುವುದು.

ಮಾದಾಪೂರ ಸಸ್ಯಕ್ಷೇತ್ರ ಅಭಿವೃದ್ಧಿ

877 (1618); ಶ್ರೀ ಅಪ್ಪಚ್ಚು ರಂಜನ್ ಎಂ. ಪಿ. (ಮಡಿಕೇರಿ)

(ಅ) ಮಾದಾಪುರ ಸಸ್ಯ ಕ್ಷೇತ್ರದಲ್ಲಿ ಖಾಲಿ ಇರುವ ಜಾಗವನ್ನು ಅಭಿವೃದ್ಧಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

(ಆ) ಈ ಯೋಜನೆಗೆ ಎಷ್ಟು ಅನುದಾನ ನಿಗದಿಪಡಿಸಲಾಗಿದೆ? (ಪೂರ್ಣ ವಿವರ ನೀಡುವುದು)

ಡಾ. ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

(ಅ) ಮಾದಾಪುರ ಸಸ್ಯ ಕ್ಷೇತ್ರದಲ್ಲಿ ಖಾಲಿ ಇರುವ ಜಾಗವನ್ನು ಬಳಸಿ ಕೊಂಡು ತೋಟಗಾರಿಕೆ ತಾಂತ್ರಿಕ ಸಂಪನ್ಮೂಲ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿದೆ.

(ಆ) ತೋಟಗಾರಿಕೆ ತಾಂತ್ರಿಕ ಸಂಪನ್ಮೂಲ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ತಾಂತ್ರಿಕ ಸಲಹೆಗಾರರಿಂದ ಯೋಜನಾ ವರದಿಯನ್ನು ಸಿದ್ಧಪಡಿಸ